

(8 ನೇ ಪುಟದಿಂದ)

ಈಕೆಯ ಎಲ್ಲಾ ಪೇಂಟಿಂಗ್‌ಗಳು ನಿಜಕ್ಕೂ ಅದ್ಭುತ ದೃಶ್ಯಕಾವ್ಯ. ಅದರಲ್ಲೂ ವಿಶೇಷವಾಗಿ ನೀರಿನ ಬಿಂದುಗಳನ್ನು ಬಣ್ಣದಲ್ಲಿ ಮೂಡಿಸಿರುವ ಪರಿಯಂತೂ, ಅರಸಿಕರನ್ನೂ ಮೂಗಿನ ಮೇಲೆ ಬೆರಳಿಡುವಂತೆ ಮಾಡುತ್ತದೆ.

ಈಕೆ ಪಡೆದ ಬಹುಮಾನಗಳಿಗೆ ಲೆಕ್ಕ ಕಷ್ಟ. 2007ರಲ್ಲಿ ನ್ಯೂಯಾರ್ಕ್ ಅಕಾಡೆಮಿ ಆಫ್ ಆರ್ಟ್ ಸಮ್ಮರ್ ಪ್ರದರ್ಶನದಲ್ಲಿ ಮೊದಲ ಬಹುಮಾನ, 2003, 04 ಮತ್ತು 06ರಲ್ಲಿ ಎಲಿಜಬೆತ್ ಗ್ರೀನ್‌ಶೀಲ್ಡ್ ಫೌಂಡೇಶನ್ ಗ್ರಾಂಟ್ ಫಾರ್ ಪೇಂಟಿಂಗ್ ಸ್ಪರ್ಧೆಯಲ್ಲಿ ಪ್ರಥಮ ಬಹುಮಾನ, 1999ರಲ್ಲಿ ನ್ಯೂಯಾರ್ಕ್ ಅಕಾಡೆಮಿ ಆಫ್ ಆರ್ಟ್‌ನ ಅಕಾಡೆಮಿಕ್ ಸ್ಕಾಲರ್‌ಶಿಪ್ ಅವಾರ್ಡ್ ಪಡೆದಿದ್ದಾಳೆ. ಜತೆಗೆ ಆರ್ಟ್ ಪ್ಲೂಸಿಯನ್ ಗ್ರಾಂಟ್, ಸ್ಟೈಲಸ್ ಗ್ರಾಂಟ್ ಮೊದಲಾದವುಗಳೂ ಈಕೆಯ ಕಲಾಕೃತಿಗಳಿಗೆ ಸಂದ ಗೌರವಗಳು.

ಈ ವರ್ಷ ಏಪ್ರಿಲ್ ತಿಂಗಳಲ್ಲಿ ನ್ಯೂಯಾರ್ಕ್‌ನ ಡಿಎಫ್‌ಎನ್ ಗ್ಯಾಲರಿಯಲ್ಲಿ ಏಕವ್ಯಕ್ತಿ ಕಲಾ ಪ್ರದರ್ಶನ ನಡೆಸಿದ ಅಲೈಸಾಳ ಕಲಾಕೃತಿಗಳು ಅನೇಕ ಕಲಾರಸಿಕರ ಮನೆಗಳಲ್ಲೂ, ಖಾಸಗಿ ಸಂಗ್ರಹದಲ್ಲೂ ಅಡಕವಾಗಿವೆ. ಪ್ರಸ್ತುತ ಮಾಂಟ್‌ಕ್ಲೇರ್ ಸ್ಟೇಟ್ ಯೂನಿವರ್ಸಿಟಿಯಲ್ಲಿ ಬೋಧಿಸುತ್ತಿರುವ ಈಕೆ ಅಪ್ರತಿಮ ಕಲಾವಿದೆ ಎನ್ನುವುದರಲ್ಲಿ ಎರಡು ಮಾತಿಲ್ಲ..

